O.S.No.:132/2014
P.W.:1

ಈ ದಿನ ದಿಃ24.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಪಿಎಸ್‌ಆರ್ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ವಾದಿ ಶಶಿಕಲಾ ವಿದ್ಯಾವಂತೆ ಎಂದರೆ ಸರಿ. ಕನ್ನಡ ಓದಲು ಬರೆಯಲು ಬರುತ್ತದೆ. ವಾದಿ ಆರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಶಶಿಕಲಾ ಆರೋಗ್ಯವಂತರಾಗಿದ್ದು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿದರೆ ನಿಜಾಂಶ ತಿಳಿಯುತ್ತದೆ ಎಂದು ಅವರ ಪರವಾಗಿ ನಾನು ಅಧಿಕಾರ ಪತ್ರದ ಮೂಲಕ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಈ ದಾವೆಯನ್ನು 1 ಎಕರೆ 25 ಕಾಲು ಗುಂಟೆಗೆ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವಾಸ್ವತ್ತು ವಾದಿ ಶಶಿಕಲಾ ಇವರಿಗೆ ಕ್ರಯದ ಮೂಲಕ ಬಂದಿರುತ್ತದೆ. ಶಶಿಕಲಾ ಇವರು 1 ಎಕರೆ 39 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ. ಖರಾಬು 14 ಗುಂಟೆ ಇರುತ್ತದೆ. ಒಟ್ಟು 2 ಎಕರೆ 13 ಗುಂಟೆ ಇರುತ್ತದೆ.

ಬಸವರಾಜು, ಚನ್ನಾಜಮ್ಮ, ಮುದ್ದೀರೇಗೌಡ ಈ ಮೂರು ಜನರಿಗೆ ಪಾಲಕ್ಷಯ್ಯ ಇವರಿಂದ ದಾವಾಸರ್ವೆ ನಂಬರ್ ಕುರಿತು ಕರಾರು ಆಗಿತ್ತು. ನಾವು ಖರೀದಿಸುವ ಪೂರ್ವದಲ್ಲಿಯೇ ಕರಾರು ಆಗಿತ್ತು ಎಂದರೆ ಸರಿ. ಸದರಿ ಮೂರು ಜನರಿಗೆ ಮಾಡಿದ ಕರಾರಿನ ಕ್ಷೇತ್ರವನ್ನು ಸೇರಿಸಿ ನಮಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರಗಳು ದಿ.20.03.1981 ರಂದು ಆಗಿರುತ್ತವೆ ಎಂದರೆ ಸರಿ. ಸದರಿ ಮೂರು ಜನರಿಗೆ 1981 ರಲ್ಲಿ ಮಾಡಿಕೊಟ್ಟಿರುವ ಕರಾರುಗಳು ಪಾಲಕ್ಷಯ್ಯ ಅವರ ಅಕ್ಕ ಭದ್ರಮ್ಮ ಸೇರಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಾಲಕ್ಷಯ್ಯ ಮಾತ್ರ ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ.

ವೀರೇಗೌಡರ ಮಗ ಕಾಳಿರೇಗೌಡ ಉಃ ಕರಿಗೌಡ, ಗೌರಮ್ಮ ಕೋಂ ವೆಂಕಟೇಗೌಡ, ಪಾರ್ವತಮ್ಮ ಕೋಂ ತಿಮ್ಮೇಗೌಡ, ಸಾವಂದಿಗೌಡ, ಹೊನ್ನೇಗೌಡ, ವೆಂಕಟೇಗೌಡ, ಶಿವರಾಮೇಗೌಡ, ಹಲಗೇಗೌಡ ಇವರುಗಳಿಗೆ ಪಾಲಕ್ಷಯ್ಯ ಕರಾರು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪಾಲಕ್ಷಯ್ಯ ರವರು ಸೈಟು ಇಲ್ಲದವರಿಗೆ ಕರಾರು ಪತ್ರ ಮಾಡಿಕೊಟ್ಟು ಸದರಿ ಕರಾರು ಪತ್ರದ ಮೂಲಕ ಸ್ವಾಧೀನ ನೀಡಿರುತ್ತಾರೆಂದರೆ ಸರಿಯಲ್ಲ. ಪಾಲಕ್ಷಯ್ಯ ಕರಾರು ಪತ್ರ ಮಾಡಿಕೊಟ್ಟ ಜನರಿಗೆ ನಾನು ದಾವಾಸ್ವತ್ತನ್ನು ಖರೀದಿಸಿದ ನಂತರ ಕರಿಗೌಡ ಇವರಿಗೆ 3 ಗುಂಟೆ, ಸಾವಂದಿಗೌಡ ಇವರಿಗೆ 2 ವರೆ ಗುಂಟೆ, ಪಾರ್ವತಮ್ಮ ಇವರಿಗೆ 3 ಮುಕ್ಕಾಲು ಗುಂಟೆ, ಶಿವಮ್ಮ ಇವರ ತಂದೆಗೆ 2 ವರೆ ಗುಂಟೆ ರವರಿಗೆ ನಾನು ಕ್ರಯಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪಾಲಕ್ಷಯ್ಯ ರವರು ಮಾಡಿಕೊಟ್ಟಿರುವ ಕರಾರು ಪತ್ರಕ್ಕೂ ಮತ್ತು ನಾನು ಮಾಡಿಕೊಟ್ಟಿರುವ ಕ್ರಯಪತ್ರಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಈ ಮೇಲೆ 4 ಜನರಿಗೆ ಮಾರಾಟ ಮಾಡಿರುವ ಸ್ವತ್ತು ದಾವಾಸ್ವತ್ತಿನಲ್ಲಿ ಬರುತ್ತಿದೆ ಎಂದರೆ ಸರಿ. ದಾವಾಸ್ವತ್ತಿಗೆ ಸಂಬಂಧಿಸಿದಂತೆ 8 ಗುಂಟೆ ಜಾಗೆಯನ್ನು ಶಾಲೆಗೋಸ್ಕರ ಸರ್ಕಾರಕ್ಕೆ ದಾನಪತ್ರ ಮಾಡಿಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಾನು ಸದರಿಯವರುಗಳಿಗೆ ಕ್ರಯಪತ್ರ ಮಾಡಿಕೊಡುವ ಪೂರ್ವದಲ್ಲಿಯೇ ಸದರಿಯವರು ಹೆಂಚಿನ ಮನೆ ಕಟ್ಟಿಕೊಂಡು ವಾಸವಿದ್ದರೂ ಎಂದರೆ ಸರಿಯಲ್ಲ.

ಕರಿಗೌಡ ಇವರಿಗೆ ಮಾರಾಟ ಮಾಡಿದ 2 ವರೆ ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಹೊನ್ನೇಗೌಡರ ಜಮೀನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಪಶ್ಚಿಮಕ್ಕೆ ಶಿವರಾಮೇಗೌಡ ಇವರ ಸೈಟು ಬರುತ್ತದೆ ಎಂದರೆ ಸರಿಯಲ್ಲ, ಉತ್ತರಕ್ಕೆ ಬಾಕಿ ಉಳಿದ ಜಮೀನು ಎಂದರೆ ನನಗೆ ಹೇಳಲು ಬರುತ್ತಿಲ್ಲ ಮತ್ತು ದಕ್ಷಿಣಕ್ಕೆ ರಸ್ತೆ ಎಂದರೆ ಸರಿ. ಸದರಿ ಜಮೀನಿನ ಪಶ್ಚಿಮಕ್ಕೆ ಶಿವರಾಮೇಗೌಡ 1 ನೇ ಪ್ರತಿವಾದಿಯ ಸೈಟು ಬರುತ್ತಿದ್ದು, ಬಾಕಿ ಉಳಿದ ಜಮೀನು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ

ಸರಿಯಲ್ಲ.

ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ನನಗೆ ಸೇರಿದ ಸ್ವತ್ತು ಇರುತ್ತದೆ, ಪಶ್ಚಿಮಕ್ಕೆ ನಾನು ದಾನ ಕೊಟ್ಟಿರುವ ಶಾಲೆ ಬರುತ್ತದೆ, ಉತ್ತರಕ್ಕೆ ರಾಜಾ ಇವರ ಜಮೀನು ಇರುತ್ತದೆ ಮತ್ತು ದಕ್ಷಿಣಕ್ಕೆ ನಾನು ಬರೆದುಕೊಟ್ಟಿರುವ 4 ಜನರ ಸ್ವತ್ತುಗಳು ಬರುತ್ತವೆಂದು ನುಡಿಯುತ್ತಾರೆ.

ದಾವಾಸ್ವತ್ತಿನ ದಕ್ಷಿಣಕ್ಕೆ ವೀರೇಗೌಡರ ಮಗ ಕಾಳಿರೇಗೌಡ ಉಃ ಕರಿಗೌಡ, ಗೌರಮ್ಮ ಕೋಂ ವೆಂಕಟೇಗೌಡ, ಪಾರ್ವತಮ್ಮ ಕೋಂ ತಿಮ್ಮೇಗೌಡ, ಸಾವಂದಿಗೌಡ, ಹೊನ್ನೇಗೌಡ, ವೆಂಕಟೇಗೌಡ, ಶಿವರಾಮೇಗೌಡ, ಹಲಗೇಗೌಡ ಇವರ ಜಮೀನುಗಳು ಇವೆ ಎಂದರೆ ಶಿವರಾಮೇಗೌಡ ಮತ್ತು ಹಲಗೇಗೌಡ ಇವರಿಗೆ ಸೇರಿದ ಯಾವುದೇ ಜಮೀನುಗಳು ಇರುವುದಿಲ್ಲ, ನಾನು ಕ್ರಯಕ್ಕೆ ಕೊಟ್ಟಿರುವ 4 ಜನರ ಜಮೀನುಗಳು ಮಾತ್ರ ಇರುತ್ತವೆಂದು ನುಡಿಯುತ್ತಾರೆ. ಪ್ರತಿವಾದಿಯರ ಸೈಟುಗಳು ದಾವಾಸ್ವತ್ತಿನ ದಕ್ಷಿಣಕ್ಕೆ ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಲಕ್ಷಯ್ಯ ಮತ್ತು ಭದ್ರಮ್ಮ ಇವರು ಈಗ 40 ವರ್ಷಗಳ ಹಿಂದೆ ತಲಾ 5 ಸಾವಿರ ಪಡೆದು ಕರಾರು ಪತ್ರವನ್ನು ಮಾಡಿಕೊಟ್ಟು ಸ್ವಾಧೀನ ಸಹ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ಆಧಾರದ ಮೇಲೆ 1 ಮತ್ತು 3 ನೇ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಕರಾರು ಪತ್ರದ ಆಧಾರದ ಮೇಲೆ 1 ಮತ್ತು 3 ನೇ ಪ್ರತಿವಾದಿಯರಿಗೆ ಕ್ರಮವಾಗಿ ಕಾನೇಸುಮಾರಿ ನಂ.179/91/3 ಹಾಗೂ 147/127 ನ್ನು ಪಂಚಾಯಿತಿಯವರು ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಲ್ಲಿ ಶೆಡ್ಡುಗಳನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಶೆಡ್ಡುಗಳಿಗೆ ಕೆಇಬಿ ಯಿಂದ ವಿದ್ಯುತ್

ಸಂಪರ್ಕ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಶೆಡ್ಡುಗಳನ್ನು ತೆಗೆದು ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮನೆ ಕಟ್ಟಿಕೊಂಡು ವಾಸವಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿಯು ದಾವಾಸ್ವತ್ತಿನಲ್ಲಿ ಯಾವುದೇ ಮನೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ.

1 ಮತ್ತು 3 ನೇ ಪ್ರತಿವಾದಿಯರ ಮತ್ತು ನನ್ನ ನಡುವೆ ರಾಜಕೀಯ ದ್ವೇಷ ಇದೆ ಎಂದರೆ ಸರಿಯಲ್ಲ. ರಾಜಕೀಯ ದ್ವೇಷದಿಂದ ಉಳಿದ ಜನರಿಗೆ ಕ್ರಯ ಪತ್ರ ಮಾಡಿಕೊಟ್ಟು ಇವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ಮತ್ತು 3 ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಪಂಚಾಯಿತಿಯಲ್ಲಿ ಖಾತೆ ಬಂದಾಗಿನಿಂದ ಸುಮಾರು 15 ವರ್ಷಗಳಿಂದ ಅವರು ಸ್ವಾಧೀನದಲ್ಲಿರುವ ಸ್ವತ್ತಿಗೆ ಕಂದಾಯ ಭರಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ದಾವಾಸ್ವತ್ತಿನಲ್ಲಿ ನಾನು ಸ್ವಾಧೀನಾದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿಸಿಕೊಂಡು ಪ್ರತಿವಾದಿಯರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇ:ನೆಂದರೆ ಸರಿಯಲ್ಲ. ಸೈಟುಗಳ ವಿಚಾರವಾಗಿ ನನಗೆ ಮತ್ತು ಪ್ರತಿವಾದಿಯರಿಗೆ ಗಲಾಟೆಯಾಗಿರುತ್ತದೆ ಎಂದರೆ ಸರಿಯಲ್ಲ.

ಒಎಸ್ 198/2003 ಎಂಬ ದಾವೆಯನ್ನು ಆರು ಜನರ ವಿರುದ್ದ 2 ಎಕರೆ 13 ಗುಂಟೆ ಕ್ಷೇತ್ರಕ್ಕೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ಹಿಂಪಡೆದಿರುತ್ತೇನೆ ಎಂದರೆ ಸಾಕ್ಷಿಯು 4 ಜನರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದರಿಂದ ಅದನ್ನು ಹಿಂಪಡೆದು ಈಗ ಹೊಸದಾವೆ ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. 2003 ರಲ್ಲಿ ದಾವೆ ಸಲ್ಲಿಸುವ ಪೂರ್ವದಲ್ಲಿ ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

O.S.No.:132/2014
P.W.:1

2003 ರಿಂದ ಇಚೆಗೆ ಈವರೆಗೂ ಪ್ರತಿವಾದಿಯರು ನನ್ನ ದಾವಾಸ್ವತ್ತಿನ ಸ್ವಾಧೀನತೆಗೆ ತೊಂದರೆ ನೀಡಿರುವುದಿಲ್ಲ ಎಂದರೆ ಸರಿ. ನನ್ನ ದೂರಿನ ಆಧಾರದ ಮೇಲೆ ಆರಕ್ಷಕ ವೃತ್ತ ನಿರೀಕ್ಷಕರು ಸ್ಥಳಕ್ಕೆ ಭೇಟಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಪೊಲೀಸರು ಸ್ಥಳ ಪರಿಶೀಲನೆ ಮಾಡಿದಾಗ ಪ್ರತಿವಾದಿಯರು ಮನೆ ಕಟ್ಟಿಕೊಂಡಿದ್ದರಿಂದ ನ್ಯಾಯಾಲಯಕ್ಕೆ ಹೋಗುವಂತೆ ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ.

2 ಮತ್ತು 3 ನೇ ಪ್ರತಿವಾದಿಯರು ಮೃತರಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ದಾವಾಸ್ವತ್ತಿನ 30 X 60 ಮೊಳ ಕ್ಷೇತ್ರದಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಅದರ ಪೂರ್ವಕ್ಕೆ ಕರಿಗೌಡ ಬಿನ್ ಈರೇಗೌಡ ಇವರ ಸೈಟು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕರಿಗೌಡ ಇವರ ಮಗಳು ಶಿವಮ್ಮ ಇವರಿಗೆ ಸೇರಿದ ಸೈಟು ಇರುತ್ತದೆ, ಪಶ್ಚಿಮಕ್ಕೆ ಸಾವಂದಿಗೌಡ ಇವರ ಸೈಟು ಇದೆ ಎಂದರೆ ಸರಿ. ಉತ್ತರಕ್ಕೆ ಸರ್ಕಾರಿ ಕುಂಟೆ ಮತ್ತು ಬಾಕಿ ಉಳಿದ ಜಮೀನು ಎಂದರೆ ಸರಿ. ದಕ್ಷಿಣಕ್ಕೆ ರಸ್ತೆ ಎಂದರೆ ಸರಿ. ಈ ಚಕ್ಕುಬಂದಿಯ ನಡುವೆ 1 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದರೂ ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಿಪಿ-3 ರಿಂದ 5 ರ ದಾಖಲೆಗಳು ದಾವಾಸ್ವತ್ತಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.

O.S.No.:132/2014
P.W.:1